ಬೆಂಗಳೂರು – ಕೋಲಾರ ಹಾಲಿನ ಒಕ್ಕೂಟಗಳ ವಿಭಜನೆ

೧೬೬೬. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಪಾನ್ಯ ಗ್ರಾಮಾಣಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಹಾಲಿನ ಒಕ್ಕೂಟವು ಕೋಲಾರ – ಬೆಂಗಳೂರು ಒಕ್ಕೂಟಗಳೆಂದು ವಿಭಜನೆಯಾಗಿದ್ದಾದು ನಿಜವೇ ?

ಆ) ವಿಭಜನೆಯಿಂದಾಗಿ ನೌಕರರನ್ನು ವರ್ಗಾವಣೆ ಮಾಡುವಾಗ ಅನುಸರಿಸಿದ ನೀತಿ ಯಾವುದು ?

ಇ) ಬೆಂಗಳೂರಿನ ಒಕ್ಕೂಟದ ನೌಕರರಿಗೂ ಮತ್ತು ಕೋಲಾರ ಒಕ್ಕೂಟದ ನೌಕರರಿಗೂ ಸಂಬಳ ಮತ್ತು ಭತ್ಯೆಗಳ ವಿಷಯಗಳಲ್ಲಿ ತಾರತಮ್ಯವಿದೆಯೇ ? ಹಾಗಿದ್ದಲ್ಲಿ, ಅದಕ್ಕೆ ಕಾರಣವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್, (ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ನಿಜ.

ಆ) ಹುದ್ದೆಗಳ ಅವಶ್ಯಕತೆ ಮತ್ತು ಸದಸ್ಯ ಸಂಘಗಳ ಸಂಖ್ಯೆಗಳ ಆಧಾರದ ಮೇಲೆ ಎರಡೂ ಒಕ್ಕೂಟಗಳೊಳಗೆ ಹಂಚಿಕೊಳ್ಳಲಾಗಿದೆ.

ಇ) ಮೂಲ ವೇತನದಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಮನೆ ಬಾಡಿಗೆ ಮತ್ತು ನಗರ ಪರಿಹಾರ ಭತ್ಯೆಗಳನ್ನು ಕೆ.ಸಿ.ಎಸ್.ಆರ್.ನ ಪ್ರಕಾರ ನೀಡಲಾಗುತ್ತಿದೆ.

ಹೊರದೇಶಕ್ಕೆ ರಫ್ತಾಗುತ್ತಿರುವ ಗ್ರಾನೈಟ್ ಬಗ್ಗೆ.

೧೬೬೭. ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ).—ಪಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕದಲ್ಲಿನ ಗ್ರಾನೈಟ್ ಗಣಿಗಳಿಂದ ಹೊರದೇಶಕ್ಕೆ ರಫ್ತಾಗುತ್ತಿರುವ ಗ್ರಾನೈಟ್ ಪ್ರಮಾಣವೆಷ್ಟು ? (ಟನ್ನುಗಳಲ್ಲಿ)

ಆ) ಗಣಿ ಪಡೆದಿರುವ ಪಾಸಗಿ ಜನರು ರಫ್ತು ಮಾಡಿರುವ ಗ್ರಾನೈಟ್ ಪ್ರಮಾಣವೆಷ್ಟು ?

ಇ) ಪರವಾನಗಿ ಪಡೆದಿರುವ ಗಣಿಗಳ ಪಾಸಗಿ ಮಾಲೀಕರ ಸಂಖ್ಯೆ ಎಷ್ಟು ?

ಶ್ರೀ ರಮೇಶ್ ಸಿ. ಜಿಗಜಿಣಗಿ, (ಗಣಿ ಮತ್ತು ಭೂವಿಜ್ಞಾನ ರಾಜ್ಯ ಮಂತ್ರಿಗಳು).—

ಅ) ಮೈಸೂರು ಖನಿಜ ನಿಯಮಿತ ವತಿಯಿಂದ ಸುಮಾರು ೪೯,೮೫೫ ಟನ್ ಶಿಲಾದಿಮ್ಮಿಗಳನ್ನು ಮತ್ತು ೧೭೫೮೮ ಘ. ಮೀ. ಪರಿಷ್ಕೃತಗೊಂಡ ಫಲಕಗಳನ್ನು ರಫ್ತು ಮಾಡಲಾಗಿದೆ.

ಆ) ಕೆನರಾ ಛೇಂಬರ್ ಆಫ್ ಇಂಡಸ್ಟ್ರೀಸ್ ಮತ್ತು ಕಾಮರ್ಸ್ ಮಂಗಳೂರು, ಇವರು ಪ್ರಕಟಣೆಯಂತೆ ಮಂಗಳೂರು ಬಂದರಿನಿಂದ ರಫ್ತು ಮಾಡಲ್ಪಟ್ಟಿರುವ ಗ್ರಾನೈಟ್ ಪ್ರಮಾಣ ಈ ಕೆಳಕಂಡಂತಿದೆ.

೧೯೮೧	...	೧,೨೨,೨೬೬	ಟನ್ನುಗಳು
೧೯೮೨	...	೧,೫೮,೧೦೪	,,
೧೯೮೩	...	೨ ೬೭,೨೯೪	,,
೧೯೮೪	...	೨,೯೨,೦೫೩	,,
೧೯೮೫	...	೨,೩೦,೧೦೧	,,
೧೯೮೬	...	೨,೮೧,೩೮೫	,,
೧೯೮೭	...	೨,೫೬,೬೮೦	,,

ಮೇಲಿನ ಅಂಕಿ ಸಂಖ್ಯೆಗಳಲ್ಲಿ ತಮಿಳುನಾಡಿನ ಹಾಗೂ ಆಂಧ್ರ ಪ್ರದೇಶದ ಕೆಲವು ಪ್ರದೇಶಗಳ ರಫ್ತನ್ನೂ ಒಳಗೊಂಡಿದೆ.

ಇ)

ಒಟ್ಟು	...	೧೩೪
ಕಪ್ಪು ಕಲ್ಲು	...	೧೧೧
ಕೆಂಪು ಕಲ್ಲು	..	೬೧
ಬೂದು ಕಲ್ಲು	...	೬೨

ಅಧ್ಯಕ್ಷರು.—ಈಗ ನಗರ ಪೋಲೀಸ್ ಠಾಣೆಯಲ್ಲಿ ಬಂಧಿಸಲಾದ ವ್ಯಕ್ತಿ ಚೆನ್ನಯ್ಯನ ಸಾವಿನ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅದಕ್ಕಿಂತ ಮುಂಚೆ ಇನ್ನೊಂದು ವಿಷಯ ಇದೆಯಲ್ಲ,

ಅಧ್ಯಕ್ಷರು.—ಮಾನ್ಯ ಖಾರ್ಗೆಯವರೇ ನಿಮ್ಮದು ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅದನ್ನು ಕನ್‌ವರ್ಟ್ ಮಾಡಿ.....

ಅಧ್ಯಕ್ಷರು.—ಕಾಲಿಂಗ್ ಅಟೆನ್‌ಷನ್‌ನಲ್ಲಿ ಚೆನ್ನಯ್ಯನ ಸಾವಿನ ಬಗ್ಗೆ ಮತ್ತು ಶಿಡಲಘಟ್ಟದ ಘಟನೆ ಬಗ್ಗೆ ಕೇಳಿದ್ದೀರಿ. ಈಗ ಎರಡಕ್ಕೂ ಉತ್ತರ ಕೊಡಿಸುತ್ತೇನೆ. ಈಗ ಚೆನ್ನಯ್ಯನ ಸಾವಿನ ಬಗ್ಗೆ ಕೊಟ್ಟಿದ್ದೀರಲ್ಲ, ಅದನ್ನು ತೆಗೆದುಕೊಳ್ಳುತ್ತೇನೆ. ಅವರೂ ಕೊಟ್ಟಿದ್ದಾರೆ, ತಾವು ಕೊಟ್ಟಿದ್ದೀರಿ. ಅವರು ಇವರ ಬಗ್ಗೆ ಹೇಳಲಿ ನೀವು ಸಹ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಹೇಳಲಿ, ನೀವು ಹೇಳಿ ಎಂದು ಇಷ್ಟೇ ಟೈಮ್ ಎಂದು ಹೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಅವರು ಮೊದಲು ಕೊಟ್ಟಿದ್ದರು.

ಶ್ರೀ ಆರ್. ವೆಂಕಟರಾಮಯ್ಯ.—ಚೆನ್ನಯ್ಯನ ಸಾವಿನ ಬಗ್ಗೆ ಹೇಳಬೇಕಾಗಿದೆ. ನಿನ್ನೆ ದಿವಸ ಬೆಂಗಳೂರು ನಗರದಲ್ಲಿ.....

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ ಮಾನ್ಯ ಯಡಿಯೂರಪ್ಪನವರು ನೋಟೀಸ್ ಕೊಟ್ಟಿದ್ದಾರೆ. ಅವರ ಪರವಾಗಿ ಹೇಳುವುದಾದರೆ ಹೇಳಿ, ಇಲ್ಲವಾದರೆ ಇವರನ್ನು ಕರೆಯಂತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ —ಪ್ರೊಸೀಜರ್ ಪ್ರಕಾರ ಹೇಳಬೇಕು.

ಅಧ್ಯಕ್ಷರು.—ಫಸ್ಟ್ ಅವರದು ಅಡ್ಜರ್ನ್‌ಮೆಂಟ್ ಮೋಷನ್ ಇದೆ. ತಾವು ದೊಡ್ಡ ಪಕ್ಷದವರು ತಾವು ಮೊದಲು ಹೇಳುತ್ತೀರಾ ?

ಶ್ರೀ ಆರ್. ವೆಂಕಟರಾಮಯ್ಯ.—ನ್ಯಾಯಂವಾಗಿ ಅವರು ಕೇಳಲಿ, ನಿಜವಾಗಿಯೂ ಅವರ ವಿರೋಧ ಪಕ್ಷದ ಮುಖಂಡರು ಇದ್ದಾರೆ, ಅವರು ಮೊದಲು ಕೇಳುವುದಾದರೆ ಕೇಳಲಿ ಎಂದು ಹೇಳುವುದು ಸರಿಯಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಲೀಡರ್ ಆಫ್ ದಿ ಆಪೋಜಿಷನ್ ಅವರು ಮೊದಲು ಹೇಳಲಿ, ಆಮೇಲೆ ಇವರು ಹೇಳಲಿ.

ಅಧ್ಯಕ್ಷರು.—ಸ್ವಲ್ಪ ವೆಂಕಟರಾಮಯ್ಯನವರೇ, ವಿರೋಧ ಪಕ್ಷದ ಮುಖಂಡರು, ದೊಡ್ಡ ಮನಸ್ಸು ಮಾಡಿದರೆ.....

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನೀವು ಕೇಳುವುದು ಧರ್ಮವಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಿಮ್ಮ ಧರ್ಮ ಔದಾರ್ಯ ನಮಗೆ ಬೇಕಾಗಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಿಮ್ಮ ಔದಾರ್ಯ ನಮಗೆ ಬೇಕಾಗಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಿಮ್ಮಗೆ ರೈಟ್ಸ್ ಇದೆ ಎಂದು ಕೇಳಿದರೆ ನಾವು ಒಪ್ಪುವುದಿಲ್ಲ. ನಿಮ್ಮ ಔದಾರ್ಯ ಧರ್ಮದ ಮೇಲೆ ನಾವು ನಿಂತಿಲ್ಲ.

ನಿಲುವಳಿ ಸೂಚನೆಯ ಪ್ರಸ್ತಾಪ

ಸುಬ್ರಹ್ಮಣ್ಯನಗರ ಪೋಲೀಸ್ ಠಾಣೆಯಲ್ಲಿ ರಿಕ್ಷಾ ಡ್ರೈವರ್ ಒಬ್ಬರ ಸಾವಿನ ಬಗ್ಗೆ

೫–೦೦ ಪಿ. ಎಂ.

ಅಧ್ಯಕ್ಷರು.—ಜೂನಿಯರ್ ಲಾಯರ್ ಮೊದಲು ಪ್ರಾರಂಭಿಸಲಿ.

ಶ್ರೀಮತಿ ಕೆ. ಎಸ್, ನಾಗರತ್ನಮ್ಮ.—ಅವರೇ ಹೇಳಲಿ ಅಂದರೆ ಔದಾರ್ಯ ಆಥ ಅಲ್ಲವೆ ? ನಮಗೆ ಬೆಳಿಗ್ಗೆ ಎದ್ದು ಪೇಪರ್ ತೆಗೆದರೆ ಏನು ಸುದ್ದಿ ಬರುತ್ತದೋ ಎಂಬ ಗಾಬರಿಯಾಗುವ ಪ್ರಸಂಗ ಶುರುವಾಗಿದೆ. 'ಲಾಕ್‌ಅಪ್‌ನಲ್ಲಿ ಸಾವು' ಪೋಲೀಸರ ಅಮಾನತ್ತು' ಎಂದು ಹೆಡ್ಡಿಂಗ್‌ನಲ್ಲಿ ಬಂದಿದೆ. ಅದೇನೆಂದರೆ, ಸುಬ್ರಹ್ಮಣ್ಯನಗರ ಪೋಲೀಸ್ ಠಾಣೆಯಲ್ಲಿ ಚೆನ್ನಯ್ಯ ಅನ್ನುವವನನ್ನು ಬಂಧಿಸಲಾಗಿತ್ತು. ಅವನ ಹೇಳಿಕೆ ಪ್ರಕಾರ ತಾನು ಕಳವು ಮಾಡಿದ್ದ ೩–೪ ಆಟೋರಿಕ್ಷಾಗಳನ್ನು, ಪೋಲೀಸರು ಪತ್ತೆ ಮಾಡಿದ್ದಾರೆ. ಅವನ ಹೇಳಿಕೆ ಮೇಲೆ ಅವು ಪತ್ತೆಯಾಗಿವೆ. ಅವನನ್ನು ಠಾಣೆಯಲ್ಲಿ ಇಟ್ಟುಕೊಂಡದ್ದು ನಿಜ. ಆದರೆ ಅವನು ಸಾಯುವವರೆಗೆ ಪೋಲೀಸರು ಏನು ಮಾಡುತ್ತಿದ್ದರು ? ಒಬ್ಬ ಕೈದಿಯನ್ನು ಹೇಗೆ ಇಟ್ಟುಕೊಳ್ಳಬೇಕು ? ಅವನನ್ನು ಬಂಧಿಸಿದ ಮೇಲೆ ಅವನ ಹತ್ತಿರ ಏನೇನು ಸಾಮಾನು ಇರಬೇಕೆಂಬುದು ಗೊತ್ತಿಲ್ಲ ಎನ್ನುವ ಹಾಗೆ ಹೇಳಿದ್ದಾರೆ. ಅವನು ನೇಣು ಹಾಕಿಕೊಂಡು ಸತ್ತುಹೋಗಿದ್ದಾನೆ. ಕೈದಿ ನೇಣು ಹಾಕಿಕೊಳ್ಳಬೇಕಾದರೆ ಅವನ ಹತ್ತಿರ ಇದ್ದ ಸಾಮಾನು ಹಗ್ಗ ಅಥವಾ ಚೈನು ಅಥವಾ ದೋತಿ ಇರಬೇಕು. ಇಂಥ ಯಾವುದಾದರೂ ಸಾಮಾನು ಇರಬೇಕು. ಅದೆಲ್ಲವನ್ನು ನೋಡದೆ ಇವರು ಕುಳಿತುಕೊಂಡು ಏನು ಮಾಡುತ್ತಿದ್ದರು ? ಆಟವಾಡುತ್ತಿದ್ದರೆ ? ಜೂಜಾಡುತ್ತಿದ್ದರೆ ? ಪೋಲೀಸರು ಕುಳಿತುಕೊಂಡು ಹುಡುಗಾಟವಾಡುತ್ತಿದ್ದಾರೆಯೇ ? ಪೋಲೀಸರು ಕಳ್ಳರನ್ನು ಹಿಡಿದುಕೊಂಡು ಹೋಗಲಿ, ತನಿಖೆ ಮಾಡಲಿ. ಕಾನೂನು ಪ್ರಕಾರ ಏನು ಮಾಡಬೇಕೋ ಮಾಡಲಿ. ಕದ್ದಿರುವವನಿಗೆ ಶಿಕ್ಷೆ ಕೊಡಬೇಕಾದುದು ನ್ಯಾಯ. ಕದ್ದವನಿಗೆ ಚಾಕಲೇಟ್ ಕೊಡಿ ಎಂದು ಯಾರೂ ಹೇಳುವುದಿಲ್ಲ. ಶಿಕ್ಷೆ ಆಗಲೇಬೇಕು. ಆದರೆ ಇಲ್ಲಿ ಸತ್ತುಹೋಗಿದ್ದಾನೆ. ಅವನ ಹೆಂಡತಿ ಹೇಳುತ್ತಾಳೆ, ತನ್ನ ಗಂಡನಿಗೆ ಮಕ್ಕಳ ಮೇಲೆ ತುಂಬಾ ಜೀವ ಇತ್ತು. ಆತ್ಮಹತ್ಯೆ ಮಾಡಿಕೊಳ್ಳುವ ಮನುಷ್ಯ ಅಲ್ಲ ವೆಂದು ಹೇಳುತ್ತಾಳೆ. ಅವಳಿಗೆ ನೀನು ಬಾಯಿ ಮುಚ್ಚಿಕೋ, ನಿನಗೆ ೫ ಸಾವಿರ ರೂಪಾಯಿ ಕೊಡುತ್ತೇವೆ, ಕೆಲಸ ಕೊಡಿಸುತ್ತೇವೆಂದು ಹೇಳುತ್ತಾರೆ. ಇದೆಂತಹ ಅಮಾನುಷತನ ? ಅವನು ಆಟೋ ರಿಕ್ಷಾಗಳನ್ನು ಕದ್ದಿರಬಹುದು, ಕಳ್ಳ ಇರಬಹುದು. ಕಳ್ಳತನ ಪತ್ತೆಯಾಗಿ ಸಾಬೀತಾಗುವವರೆಗೆ ನೋಡಿಕೊಳ್ಳಬೇಕಾದುದು ಯಾರ ಜವಾಬ್ದಾರಿ ? ಯಾರು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೋ ಅವರ ಕರ್ತವ್ಯ. ಅದನ್ನು ಬಿಟ್ಟು ಬೇಕಾಬಿಟ್ಟಿ ಬಿಟ್ಟು ಸಾಯಿಸಿದ್ದಾರೆಂದು, ನಮ್ಮ ಭಾವನೆ. ಹೆಂಡತಿಗೆ ಕೆಲಸ ಕೊಡಿಸುತ್ತೇವೆ, ದುಡ್ಡು ಕೊಡುತ್ತೇವೆಂದರೆ ಒಂದು ಜೀವದ ಬೆಲೆ ಎಷ್ಟು ? ಮಾಂಗಲ್ಯದ ಬೆಲೆ ಎಷ್ಟು ? ನೂರು ರೂಪಾಯಿಯೇ ? ಸಾವಿರ ರೂಪಾಯಿಯೇ ? ಲಕ್ಷ ರೂಪಾಯಿಯೇ ? ಎಷ್ಟು ಬೆಲೆ ಕೊಟ್ಟರೆ ಮಾಂಗಲ್ಯ ವಾಪಸ್ಸು ಬರುವುದಕ್ಕೆ ಸಾಧ್ಯ ? ಈ ರೀತಿ